

ಬೇರೆ ಬೇರೆ ದಂಧೆಗಳು. ಮತ್ತೆ ಇವುಗಳನ್ನೆಲ್ಲಾ ನೋಡಿಕೊಳ್ಳಲು ಬೇರೆ ಏನೆಲ್ಲಾ ಬೇಕಾಗುವುದು – ಎಲ್ಲವೂ ಅವನ ಬಳಿಯಿದ್ದವು. ಒಂದೆರಡು ವರ್ಷಗಳ ಹಿಂದೆ ಒಬ್ಬ 'ದಾದಾ' ಹರಾಜು ಪ್ರಕ್ರಿಯೆಯಲ್ಲಿ ಹೆಚ್ಚು ಹಣಕ್ಕೆ ಕೂಗು ಹಾಕಿ ಗುತ್ತಿಗೆಯನ್ನು ತೆಗೆದುಕೊಂಡ. ಆದರೆ ಅವನ ಆಟ ಎಷ್ಟು ದಿನಗಳು ನಡೆದವು! ಅವನು ಸಾಲಗಾರನಾಗಿ ಹೋಗಬೇಕಾಯಿತು. ಅಂದಿನಿಂದ ಚೌಧರಿಯ ಪ್ರಭಾವ ಹೆಚ್ಚಿದೆ. ಚೌಧರಿ ಕಲಬೆರಕೆ ಮದ್ಯವನ್ನು ಮಾರುತ್ತಾನೆ ಎಂದು ಕೆಲವರು ಹೇಳುತ್ತಿದ್ದರು, ಆದರೆ ಇಂಥ ಸಮಯದಲ್ಲಿ ನಿಜಾಂಶವನ್ನು ಯಾರು ನೋಡುತ್ತಾರೆ? ಅಂಥ ಸಮಯಕ್ಕೆ ಅಮಲಿನ ಆವಶ್ಯಕತೆ ಇರುತ್ತದೆ, ಅಂಥ ಅಮಲು ಚೌಧರಿಯ ಮದ್ಯದಲ್ಲಿತ್ತು; ಚೌಧರಿಯ ಮದ್ಯದ ಅಂಗಡಿಯಲ್ಲಿ ಖರೀದಿಸಿದ ಕಳ್ಳಿಗೆ ಪೂರ್ಣ ಪ್ರಮಾಣದಲ್ಲಿ ಹಣ ವಸೂಲಾಗುತ್ತದೆ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು.

ಅವನು ಪೇಟೆಯಲ್ಲಿ ಒಮ್ಮೆ ಅಡ್ಡಾಡಿ ಬರಲು ಯೋಚಿಸಿದ. ಇದರಿಂದ ಸಮಯ ಸಹ ಕಳೆಯುವುದು, ಅಲ್ಲದೆ ಗಿರಾಕಿ ಸಹ ಸಿಗಬಹುದು... ಅವನು ಇನ್ನೂ ರಸ್ತೆಯ ತುದಿಗೆ ಹೊರಳಿದ್ದ, ಆಗಲೇ ಮೇಲಿನಿಂದ ಕೇಳಿಸಿತು, 'ಅಣ್ಣಾ, ಇವತ್ತು ಇಷ್ಟು ಬೇಗ ಬಂದಿದ್ದೀಯ? ಏನಾದ್ರು ತಂದಿದ್ರೆ ಮೇಲೆ ಬಾ'. ಏಳನೆಯ 'ಕೋಠಾ'ದ ಶಕುಂತಲಾ ಹೇಳಿದಳು. ಅವನು ಅವಳೆಡೆಗೆ ನೋಡಿದ, ಅವಳಿನ್ನೂ ಸಿದ್ಧಳಾಗಿರಲಿಲ್ಲ. ಅವಳು ಸಾಮಾನ್ಯ ಉಡುಪುಗಳಲ್ಲಿ ಅಲಂಕಾರವಿಲ್ಲದೆ ಅದೆಷ್ಟು ಕುರೂಪಿಯಾಗಿ ಕಾಣಬರುತ್ತಿದ್ದಳು! ಅವಳಿಗಿನ್ನೂ ಮೂವತ್ತೈದು ವರ್ಷಗಳಾಗಿತ್ತು, ಆದರೆ ಅವಳ ಕಣ್ಣುಗಳು ಹೂತು ಹೋಗಿದ್ದವು, ಗಲ್ಲಗಳು ಬಾಡಿದ್ದವು. ಮುಖದಲ್ಲಿ ಸುಕ್ಕುಗಳು ಮೂಡಿದ್ದವು. ರಾಮ ಅವಳ ಮಾತಿಗೆ ಉತ್ತರಿಸಲಿಲ್ಲ, ಮುಗುಳ್ನಗುತ್ತಾ ಮುಂದಕ್ಕೆ ಹೋಗಿ ಯೋಚಿಸಿದ, 'ರಾತ್ರಿಯಾಗುತ್ತಲೇ ಇವರೆಲ್ಲಾ ಅದೆಷ್ಟು ಸೌಂದರ್ಯವತಿಯರಾಗಿ ಕಾಣಿಸುತ್ತಾರೆ'. ತಾನು ಅದೆಷ್ಟೋ ದಿನಗಳಿಂದ ಶಕುಂತಲಾಗೆ ಯಾವ ಗ್ರಾಹಕನನ್ನು ಸಹ ಕೊಡಲಿಲ್ಲ ಎಂಬುದು ಅವನಿಗೆ ನೆನಪಾಯಿತು. ಅವನು ಇಲ್ಲಿಗೆ ಬಂದಾಗ ಶಕುಂತಲಾಳಿಗಾಗಿ ಹುಚ್ಚನಾಗಿದ್ದ. ತನ್ನೆಲ್ಲಾ ಗಿರಾಕಿಗಳನ್ನು ಅವಳ ಬಳಿಗೇ ಕರೆದೊಯ್ಯುತ್ತಿದ್ದ.

'ಸಾಹೇಬ್ರೆ, ಒಮ್ಮೆ ನೋಡಿದರೆ, ನಿಮ್ಮನ್ನೇ ನೀವು ಮರೆತುಬಿಡ್ತೀರ! ಅವಳು ದೊಡ್ಡ ನವಾಬರ ಸೂಳೆಯಾಗಿದ್ದಳು. ಪಾಪ, ಅವಳ ಹಣೆಬರಹ... ನವಾಬಗಿರಿ ಹೋದ ನಂತರ ದಂಧೆಗಿಳಿಯಬೇಕಾಯಿತು. ಒಮ್ಮೆ ನನ್ನ ಮಾತಿಗೆ ಬೆಲೆಕೊಟ್ಟು ಹೋಗಿ ಬನ್ನಿ!...'

ವಾಸ್ತವವಾಗಿಯೂ, ಒಮ್ಮೆ ಹೋದ ಸಾಹೇಬರುಗಳು ಅಲ್ಲಿಯವರೇ ಆಗಿ ಉಳಿದುಬಿಡುತ್ತಿದ್ದರು. ಅವಳ ಕಣ್ಣುಗಳು ಅದೆಷ್ಟು ಆಕರ್ಷಕವಾಗಿದ್ದವು... ಅವಳಿಗೆ ಶೃಂಗಾರದ ಅವಶ್ಯಕತೆಯೇ ಇರಲಿಲ್ಲ. ಒಮ್ಮೆ ಅವಳ ಬಳಿಗೆ ಹೋದವರು, ಅಲ್ಲಿಗೇ ಸದಾ ಹೋಗುತ್ತಿದ್ದರು. ಅಲ್ಲಿ ಖರ್ಚು ದುಪ್ಪಟ್ಟಿತ್ತು, ಆದರೆ ರಾಮನಿಗೆ ಅವನ ಪಾಲು ಸಿಕ್ಕೇ ಸಿಗುತ್ತಿತ್ತು. ಆದರೆ ಇದೆಲ್ಲಾ ಘಟಿಸಿ ಹತ್ತು ವರ್ಷಗಳೇ ಸಂದಿವೆ. ಈ ಹತ್ತು ವರ್ಷಗಳಲ್ಲಿ ಏನೇನೋ ಕಳೆದು ಹೋದವು. ಅವನಿಗೆ ನೆನಪಾಯಿತು... ಶಕುಂತಲಾಗೆ ಮೂರನೆಯ ಮಗು ಸಹ ಗಂಡಾದಾಗ ಕೋಠಾಗಳಲ್ಲಿ ಅವಳಿಗಿದ್ದ ಗೌರವ ಕಡಿಮೆಯಾಯಿತು. ನಾನೂ ಮತ್ತು ಶಕುಂತಲಾ, ಒಂದು ಹೆಣ್ಣು ಮಗು ಹುಟ್ಟಲೆಂದು ಅದೇನೇನೋ ಹರಕೆ ಹೊತ್ತಿದ್ದೆವು. ಆದರೆ ಅವಳ ದುರದೃಷ್ಟ, ಮೂರನೆಯ ಮಗು ಸಹ ಗಂಡಾಯಿತು. ಅವಳು ಆ ಮೂರು ಮಕ್ಕಳನ್ನು ಮಸೂರಿಯ ಶಾಲೆಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದಳು. ಮಕ್ಕಳಿಗೆ ತನ್ನ ಕಸುಬಿನ ಬಗ್ಗೆ ತಿಳಿಯಬಾರದೆಂಬುದು ಅವಳಿಚ್ಛೆಯಾಗಿತ್ತು. ಆದರೆ ಅವರು ದೊಡ್ಡವರಾದ ನಂತರ... ಕಡೆಗೆ ಆಗ ಯೋಚಿಸಿದರಾಯಿತು ಎಂದುಕೊಳ್ಳುತ್ತಿದ್ದಳು.

ಶಕುಂತಲಾ ಇನ್ನಿಬ್ಬರು ಹುಡುಗಿಯರನ್ನು ಇಟ್ಟುಕೊಂಡಿದ್ದಾಳೆ. ನೃತ್ಯ–ಸಂಗೀತ–ಹಾಡು ಈ ಹಿಂದಿನಂತೆಯೇ ಸಾಗುತ್ತಿದ್ದವು. ಸೀತಾ ಮತ್ತು ರಾಮಪಿಯಾರಿ ಬಂದ ನಂತರ ಏಳನೆಯ